PlanetRead

Literacy for a Billion

Movie: Bandhana
Year: 1984

Song: Noorondu Nenapu Edeyaladinda
Lyricist: R N Jayagopal

ನೂರೊಂದು ನೆನಪು ಎದೆಯಾಳದಿಂದ
ಹಾಡಾಗಿ ಬಂತು ಆನಂದದಿಂದ

ನೂರೊಂದು ನೆನಪು ಎದೆಯಾಳದಿಂದ
ಹಾಡಾಗಿ ಬಂತು ಆನಂದದಿಂದ
ನೂರೊಂದು ನೆನಪು ಎದೆಯಾಳದಿಂದ
ಹಾಡಾಗಿ ಬಂತು ಆನಂದದಿಂದ
ಸಿಂಧೂರ ಬಿಂದು ನಗಲಮ್ಮ ಎಂದೂ
ಎಂದೆಂದೂ ಇರಲಮ್ಮ ಈ ದಿವ್ಯ ಬಂಧ
ನೂರೊಂದು ನೆನಪು ಎದೆಯಾಳದಿಂದ
ಹಾಡಾಗಿ ಬಂತು ಆನಂದದಿಂದ

ಒಲವೆಂಬ ಲತೆಯು
ತಂದಂಥ ಹೂವು
ಮುಡಿಯೇರಿ ನಲಿವು
ಮುಡಿ ಜಾರಿ ನೋವು
ಕೈಗೂಡಿದಾಗ ಕಂಡಂಥ ಕನಸು
ಅದೃಷ್ಟದಾಟ ತಂದಂಥ ಸೊಗಸು
ಪ್ರೀತಿ ನಗುತಿರಲಿ
ಬಾಳು ಬೆಳಗಿರಲಿ
ಪ್ರೀತಿ ನಗುತಿರಲಿ
ಬಾಳು ಬೆಳಗಿರಲಿ
ನೀವೆಂದೂ ಇರಬೇಕು ಸಂತೋಷದಿಂದ

ನೂರೊಂದು ನೆನಪು ಎದೆಯಾಳದಿಂದ
ಹಾಡಾಗಿ ಬಂತು ಆನಂದದಿಂದ

ತುಟಿ ಮೇಲೆ ಬಂದಂಥ
ಮಾತೊಂದೆ ಒಂದು
ಎದೆಯಲ್ಲಿ ಉಳಿದಿದ್ದು
ಮುನೂರ ಒಂದು
ಮೂರು ಗಂಟಲ್ಲಿ ಈ
ಬಾಳ ನಂಟು
ಕೇಳಿ ಪಡೆದಾಗ
ಸಂತೋಷ ಉಂಟು
ನಿನ ಹರುಷದಲಿ
ನನ ಉಸಿರಿರಲಿ
ನಿನ ಹರುಷದಲಿ
ನನ ಉಸಿರಿರಲಿ
ನನೆಲ್ಲ ಹಾರೈಕೆ ಈ ಹಾಡಿನಿಂದ
ನೂರೊಂದು ನೆನಪು ಎದೆಯಾಳದಿಂದ
ಹಾಡಾಗಿ ಬಂತು ಆನಂದದಿಂದ
ನೂರೊಂದು ನೆನಪು ಎದೆಯಾಳದಿಂದ
ಹಾಡಾಗಿ ಬಂತು ಆನಂದದಿಂದ
ಆನಂದದಿಂದ
ಆನಂದದಿಂದ

*Disclaimer: PlanetRead does not own these lyrics and is not using them for any commercial purpose. For over 20 years, PlanetRead has been subtitling Bollywood songs for mass literacy. These lyrics are being offered as part of PlanetRead's literacy development initiative.*

*PlanetRead is a tax-exempt, not-for-profit: 501(c) (3) in the United States and 80(G) in India.*